**ಸಾಕ್ಷಿಯನ್ನು ದಿನಾಂಕ 23-09-2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಪಾಟೀಸವಾಲು- 1ರಿಂದ 3ನೇ ಆರೋಪಿತರ ಪರವಾಗಿ ಶ್ರೀ.ಪಿ.ಕೆ.ಎಂ. ವಕೀಲರಿಂದಃ</u>**

ನಾನು ಸಹ ಕಾಂಗ್ರೇಸ್ ಪಕ್ಷದಲ್ಲಿ ಇದ್ದೆ ಆದರೆ ಈಗ ಇಲ್ಲ. ದಿನಾಂಕ 28-09-2022 ರಂದು ಜಯಣ್ಣ ರವರ ಅಕ್ಕ ತೀರಿ ಹೋಗಿದ್ದಾರೆ ಎಂದು ನಾವು ಜಗಜೀವನ್ ರಾವ್ ಕಾಲೋನಿಗೆ ಹೋಗಿದ್ದೆವು. ಅರೆಕಾಡಿನಲ್ಲಿ ಅಂಬೇಡ್ಕರ್ ಕಾಲೋನಿ ಇಲ್ಲ, ನಮ್ಮ ಮನೆಯಿಂದ ಚಾಸಾ-5 ರವರ ಹೋಟೇಲ್ ಗೆ ಅಂದಾಜು 3 ಕಿ.ಮೀ. ದೂರ ಇರಬಹುದು. ಆ ದಿನ ಆರೋಪಿಗಳಲ್ಲಿ 1ನೇ ಆರೋಪಿ ಚಾಸಾ-5 ರವರ ಹೋಟೇಲ್ ನ ಹೊರಗಡೆ ಇದ್ದರು ಮತ್ತು 2 ಹಾಗೂ 3ನೇ ಆರೋಪಿಗಳು ಹೋಟೇಲ್ ನ ಒಳಗಡೆ ಮುಂಬಾಗಿಲಿನಿಂದ ಒಟ್ಟಿಗೆ ಬಂದಿದ್ದರು. ಗ್ಲಾಸ್ ನ್ನು ಹೊಡೆಯಲು ಆಯಿತು ಎಂದು ಹೇಳುವ ಜೀಪಿನ ನಂಬರ್ KA-31, ಆದರೆ ನಂಬರ್ ನೆನಪಿಲ್ಲ. ಪೊಲೀಸರು ಅದೇ ದಿನ ಸಾಯಂಕಾಲ ಮಹಜರ್ ಗೆ ಬಂದ ಸಂದರ್ಭದಲ್ಲಿ ಸದರಿ ಜೀಪಿನ್ನು ತೆಗೆದುಕೊಂಡು ಹೋಗಿದ್ದರು. ಅವರು ಹೇಗೆ ಸದರಿ ಜೀಪಿನ್ನು ತೆಗೆದುಕೊಂಡು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಮಹಜರ್ ಮಾಡುವ ಸಂದರ್ಭದಲ್ಲಿ ಜೀಪಿನ ಕೀಯನ್ನು ನಾನು ಕೊಟ್ಟಿರುವುದೋ ಅಥವಾ ಪೊಲೀಸರು ಅದನ್ನು ತೆಗೆದುಕೊಂಡಿರುವುದೋ ನನಗೆ ಗೊತ್ತಿಲ್ಲ. ಆಸ್ಪತ್ರೆಯಲ್ಲಿ ಆಗಲೀ ಅಥವಾ ಬೇರೆ ಎಲ್ಲಾಗಲೀ ಜೀಪಿನ ಕೀಯನ್ನು ಪ್ರಾಸಾ-1 ನನಗೆ ನೀಡಿಲ್ಲ. ನಾನು ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ವಿಜು ಎಂಬುವವರ ಕಾರಿನಲ್ಲಿ ಬಂದಿದ್ದೆ. ವೈದ್ಯರು ನನಗೆ ಯಾವುದೇ X-ray film ಆಗಲೀ ಅಥವಾ ವರದಿಯನ್ನಾಗಲೀ ನೀಡಿಲ್ಲ. ನಾನು ಸದರಿ X-ray film ನ್ನಾಗಲೀ ಅಥವಾ ವರದಿಯನ್ನಾಗಲೀ ನ್ಯಾಯಾಲಯದಲ್ಲಿ ನೋಡಿ ಗುರುತಿಸಿಲ್ಲ. ಮಹಜರ್ ಮಾಡಲು ಪೊಲೀಸರು ನನಗೆ ನೋಟಿಸ್ಸು ನೀಡಿಲ್ಲ ಆದರೆ ಫೋನ್ ಮೂಲಕ ತಿಳಿಸಿದ್ದಾರೆ. ಪೊಲೀಸರು ಜೀಪಿನ ಬಾನೇಟ್ ಮೇಲೆ ಬಿದಿದ್ದ ಮತ್ತು ನೆಲದ ಮೇಲೆ ಬಿದಿದ್ದ ಗಾಜಿನ ಚೂರುಗಳನ್ನು ತೆಗೆದುಕೊಂಡಿದ್ದಾರೆ.

2020 ರಲ್ಲಿ ನಾನು ಹೊಸ್ಕೇರಿ ಗ್ರಾಮ ಪಂಚಾಯ್ತಿಯಲ್ಲಿ ಪಂಚಾಯತ್ ಚುನಾವಣೆಗೆ ಸ್ಪರ್ಧಿಸಿದ್ದೆ. ನನ್ನ ಪ್ರತಿಸ್ಪರ್ಧಿ 1ನೇ ಆರೋಪಿ. 1ನೇ ಆರೋಪಿಗೆ 257

ಮತಗಳು ಬಂದಿದ್ದವು ಮತ್ತು ನನಗೆ 254 ಮತಗಳು ಬಂದಿದ್ದವು. 1ನೇ ಆರೋಪಿ ಚುನಾವಣೆಯಲ್ಲಿ ನನ್ನ ವಿರುದ್ಧ ಗೆದ್ದಿದ್ದಾನೆ ಎಂದರೆ ಸರಿ. ಸದರಿ ಚುನಾವಣೆಯ ಫಲಿತಾಂಶದ ನಂತರ ನಾನು ಮಡಿಕೇರಿಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ E.P No.3/2021 ರಂತೆ ಒಂದು ಅರ್ಜಿಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿ ಸಹ ನ್ಯಾಯಾಲಯದಲ್ಲಿ ವಜಾ ಆಗಿದೆ ಎಂದರೆ ಸರಿ. ಈಗ ನಾನು ನೋಡುತ್ತಿರುವ ದಾಖಲೆ ಸದರಿ ಅರ್ಜಿಯ ತೀರ್ಪಿನ ದೃಢೀಕೃತ ನಕಲು ಆಗಿದ್ದು, ಅದನ್ನು ನಿಡಿ-6 ಎಂದು ಗುರುತಿಸಲಾಯಿತು. ಚುನಾವಣೆಯಲ್ಲಿ 1ನೇ ಆರೋಪಿ ಗೆದ್ದ ಕಾರಣ ನನಗೆ 1ನೇ ಆರೋಪಿಯ ವಿರುದ್ದ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಆ ಕಾರಣದಿಂ ದ 28-09-2022 ರಂದು 1 ರಿಂದ 3ನೇ ಆರೋಪಿಗಳು ಪ್ರಾಸಾ-1 ರವರಿಗೂ 2ನೇ ಆರೋಪಿ ನನಗೂ ಹಲ್ಲೆ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

ಮು.ಮಾ-1, ಮು.ಮಾ-2 ಮತ್ತು ಮು.ಮಾ-6 ನ್ನು ನನಗೆ ಸಿದ್ದಾಪುರ ಆಸ್ಪತ್ರೆಯಿಂದ ಯಾರು ಕೊಟ್ಟರು ಎಂದು ಗೊತ್ತಿಲ್ಲ.

ನಿಪಿ-3 ರ ಫೋಟೊಗಳನ್ನು ಪೊಲೀಸರು ಯಾವುದರಿಂದ ತೆಗೆದಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ-2 ಕ್ಕೆ ನಾನು ಸ್ಥಳದಲ್ಲೇ ಸಹಿ ಹಾಕಿದ್ದೇನೆ. ಮರಗೋಡು ಸಿದ್ಧಾಪುರ ಮುಖ್ಯ ರಸ್ತೆ ಚಾಸಾ-5 ರವರ ಹೋಟೇಲ್ ನ ಮುಂಭಾಗದಲ್ಲಿ ಇದೆ ಆದರೆ ನಿಪಿ-2 ರಲ್ಲಿ ಇರುವ ನಕ್ಷೆಯಲ್ಲಿ ರಸ್ತೆಯನ್ನು ಹೋಟೆಲ್ ನ ಹಿಂಭಾಗದಲ್ಲಿ ತೋರಿಸಿದ್ದಾರೆ. ಸದರಿ ನಕ್ಷೆಯಲ್ಲಿ ಹೋಟೆಲ್ ನ ಮುಂಭಾಗವನ್ನು ಹೋಟೆಲ್ ಕಟ್ಟಡದ ಎಡಬದಿಗೆ ತೋರಿಸಿದ್ದು, ಅದು ಬಲಭಾಗದಲ್ಲಿ ಇರಬೇಕಿತ್ತು. ನಿಪಿ-2 ರ ಮಹಜರ್ ತಯಾರಿಸುವ ಸಂಜೆ 4.00 ಗಂಟೆ ಆಗಿರಬಹುದು. ನಿಪಿ-3 ಹಾಗೂ ನಿಪಿ-6 ರ ಫೋಟೋಗಳಲ್ಲಿ ನಾನು ಒಂದೇ ಟಿ-ಶರ್ಟಿನಲ್ಲಿ ಇದ್ದೇನೆ ಎಂದರೆ ಸರಿ. ನಿಪಿ-5 ರ ಮಹಜರ್ ನಲ್ಲಿ ಬಟ್ಟೆಗಳನ್ನು ಹಾಜರುಪಡಿಸಲು ಪೊಲೀಸರು ನನಗೆ ಫೋನ್ ಮಾಡಿ ಹೇಳಿದ್ದರು. ನನ್ನ ಚುನಾವಣೆಗೆ ಸಂಬಂಧಿಸಿದಂತೆ ಪ್ರಾಸಾ-1 ನನಗೆ ಯಾವುದೇ ಸಹಕಾರ ನೀಡಿಲ್ಲ. ಪ್ರಾಸಾ-1 ನನ್ನ ಸ್ನೇಹಿತರು. ನನಗೆ ಹಾಗೂ ಪ್ರಾಸಾ-1 ರವರಿಗೆ ಬೇರೆ ಯಾವುದೇ ಸನ್ನಿವೇಶದಲ್ಲಿ ಆದ ಗಾಯಗಳಿಗೆ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-2 ಹಾಗೂ ನಿಪಿ-5 ನ್ನು ಈ ಪ್ರಕರಣಕೋಸ್ಕರ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ-3 ಹಾಗೂ ನಿಪಿ-6 ರ ಫೋಟೊಗಳನ್ನು ಸಹ ಈ ಪ್ರಕರಣಕ್ಕಾಗಿ ಬೇರೆಯೇ

ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ಮು.ಮಾ-3 ರಿಂದ ಮು.ಮಾ-5 ರ ಮುದ್ದೆಮಾಲುಗಳಿಗೂ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

Sd/-XXX

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ